ನಮ್ಮಲ್ಲಿ ಅನೇಕ ಜನರು ಹಣದ ಬಗ್ಗೆ
ತಪ್ಪು ಆಲೋಚನೆಗಳನ್ನು ಹೊಂದಿರುತ್ತಾರೆ.
ಇದರಿಂದ ನಮ್ಮ ಜಾಗೃತ ಮತ್ತು ಸುಪ್ತಮನಸ್ಸಿನಲ್ಲಿ
ತಿಳಿದೋ ತಿಳಿಯದೆಯೋ
ಅಭಿವೃದ್ಧಿ ಹೊಂದುವ ಶಕ್ತಿಯನ್ನು ತಡೆಯುತ್ತಿರುತ್ತದೆ.
ಈ ತಡೆಯಿಂದ ನಮ್ಮ ಜೀವನದ ಅಭಿವೃದ್ಧಿಯ
ತಡೆಯಾಗುತ್ತದೆ.

ಅಭಿವೃದ್ಧಿಯ ಸತ್ಯಪ್ರತಿಜ್ಞೆಯು ಸ್ವಯಂ ಪ್ರೇರಿತ ತಡೆಯನ್ನು ತೆಗೆದು ಹಾಕಲು ಮತ್ತು ದಾನ ಮಾಡುವ ಮತ್ತು ಹಂಚುವ ಅಭ್ಯಾಸವನ್ನು ಪ್ರೋತ್ಸಾಹಿಸಲು ಮತ್ತು ಸಂಮೃದ್ಧಿ, ಸಂಪತ್ತು ಮತ್ತು ಹಣವು ನಮ್ಮ ಬಾಳಿನಲ್ಲಿ ಬರುವಂತೆ ಮಾಡಲು ಬರೆಯಲಾಗಿದೆ.

## ಅಭ್ಯಾಸ ಮಾಡುವ ವಿಧಾನ


ನೇರವಾಗಿ ನಿಂತುಕೊಳ್ಳಿ ನಿಮ್ಮ ನಾಲಿಗೆಯನ್ನು ಬಾಯಿಯ ಅಂಗುಳಕ್ಕೆ ತಾಕಿಸಿ (ಕೇಛರಿ ಮುದ್ರೆ)

ಕೈಗಳು: ಹೆಬ್ಬೆರಳು ಮತ್ತು ಮಧ್ಯದ ಬೆರಳಿನ ತುದಿಯನ್ನು ಒಟ್ಟಿಗೆ ತಾಕಿಸಿ (ಹಣ ಬರುವ ಮುದ್ರೆ)

ಓದುವಾಗ 14 ಬಾರಿ ಅರ್ಧ ಕುಳಿತು ನಿಲ್ಲುವುದು ಮತ್ತು ಓದುವಾಗ ಮೇಲಿನ ಚಿನ್ಹೆಯನ್ನು ನೋಡವುದು



ಕೇಛರಿ ಮುದ್ರೆ



ಹಣ ಬರುವ ಮುದ್ರೆ

Copyright © All rights reserved

# ಅಭಿವೃದ್ಧಿಯ ಸತ್ಯಪ್ರತಿಜ್ಞೆ

Copyright © All rights reserved

ಅನೇಕ ಮಹಿಳೆಯರು ತಮ್ಮ ಚಿಕ್ಕ ವಯಸ್ಸಿನಿಂದಲೆ ತುಂಬ ನಕಾರಾತ್ಮಕ ಭಾವನೆಗಳನ್ನು ಹೊಂದಿರಬಹುದು.

ಜಾಗೃತ ಮತ್ತು ಸುಪ್ತಪ್ರಜ್ಞೆಯಲ್ಲಿ ಈ ಜನ್ಮದಲ್ಲೋ, ಹಿಂದಿನ ಜನ್ಮದಲ್ಲೋ ದೀರ್ಘಕಾಲದಿಂದ ಇವರು ಹೊಂದಿರುವ ಸುಪ್ತ ನಕಾರಾತ್ಮಕ ಭಾವನೆಗಳನ್ನು ನಿವಾರಿಸಲು, ಮಹಿಳೆಯರ ಸತ್ಯಪ್ರತಿಜ್ಞೆಯನ್ನು ನೀಡಲಾಗಿದೆ.

ಈ ಸತ್ಯ ಪ್ರತಿಜ್ಞೆಯನ್ನು ಅಗತ್ಯಕ್ಕನುಸಾರವಾಗಿ ಓದುವುದರ ಮೂಲಕ ಮತ್ತು ಪ್ರಾಣ ಹೀಲಿಂಗ್ ದಂಡದಿಂದ ಚಿಕಿತ್ಸೆ ಮಾಡಿಕೊಳ್ಳುವುದರ ಮೂಲಕ ತಮ್ಮ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ನೋವಿನಿಂದ ಮುಕ್ತರಾಗಬಹುದು.

## ಏಕೆಂದರೆ

ಪ್ರತಿಯೊಬ್ಬ ಮಹಿಳೆಯು ಸಂತೋಷವಾಗಿದ್ದರೆ,
ಪ್ರತಿಯೊಂದು ಮನೆಯು ಸಂತೋಷವಾಗಿರುತ್ತದೆ.

ಪ್ರತಿಯೊಂದು ಮನೆಯು ಸಂತೋಷವಾಗಿದ್ದರೆ,
ಪ್ರತಿಯೊಂದು ನಗರವು ಸಂತೋಷವಾಗಿರುತ್ತದೆ.

ಪ್ರತಿಯೊಂದು ನಗರವು ಸಂತೋಷವಾಗಿದ್ದರೆ,
ಪ್ರತಿಯೊಂದು ದೇಶವು ಸಂತೋಷವಾಗಿರುತ್ತದೆ.

ಪ್ರತಿಯೊಂದು ದೇಶವು ಸಂತೋಷವಾಗಿದ್ದರೆ,
ಇಡೀ ಪ್ರಪಂಚವೇ ಸಂತೋಷವಾಗಿರುತ್ತದೆ.

ಪ್ರತಿಯೊಬ್ಬ ಮಹಿಳೆಗೂ ಸಂತೋಷವೆ ಬಹಳ
ಮುಖ್ಯವಾದ ವಸ್ತುವಾಗಿರುತ್ತದೆ.

Copyright © All rights reserved

# ಮಹಿಳೆಯರ ಸತ್ಯಪ್ರತಿಜ್ಞೆ

Copyright © All rights reserved

ನಾನು ಹೆಣ್ಣಾಗಿ ಹುಟ್ಟಿದ್ದಕ್ಕಾಗಿ ಕೆಲವೊಮ್ಮೆ
ವಿಷಾಧಿಸುತ್ತೇನೆ.

ಈ ಜನ್ಮದಲ್ಲಿ ಹೆಣ್ಣಾಗಿ ಹುಟ್ಟಿದ್ದರಿಂದ
ನಾನು ಹೆಚ್ಚಾಗಿ ನಿರಾಶೆಗೊಳಗಾಗುತ್ತಿದ್ದೇನೆ.

ನನ್ನನ್ನು ನಾನು ಆಳವಾಗಿಯೂ, ಸಂಪೂರ್ಣವಾಗಿಯೂ,
ಪ್ರಜ್ಞಾಪೂರ್ವಕವಾಗಿಯೂ ಸ್ವೀಕರಿಸಿಕೊಳ್ಳುತ್ತೇನೆ.

ನಾನು ಮಹಿಳೆಯಾಗಿರುವುದರಿಂದ ಅನೇಕ
ನಿರಾಶೆಗಳಿಗೆ ಒಳಗಾಗುತ್ತಿದ್ದೇನೆ.

ಮೊದಲನೆಯದಾಗಿ ನನ್ನ ನೋವು ತುಂಬಿದ
ಅಸೌಖ್ಯಕರವಾದ ಮುಟ್ಟು,
ಅನಂತರ ನನ್ನ ಸುತ್ತಲೂ ಇರುವ ಜನರು,
ಅತ್ತೆ, ನಾದಿನಿಯರು, ಪತಿ, ಪುರುಷ ಗೆಳೆಯರು,
ಪುರುಷ ಸಹೋದ್ಯೋಗಿಗಳು,
ಅನಂತರ ಹೆಣ್ಣಾಗಿ ಹುಟ್ಟಿದ್ದರಿಂದ
ನನ್ನಿಂದ ಮಾಡಲಾಗದೆ ಹೋದ ಎಲ್ಲಾ ವಿಷಯಗಳು.

ನಾನು ನಿಸ್ಸಹಾಯಕಳಾಗಿಯೂ, ಹತಾಶಳಾಗಿಯೂ,
ನೊಂದವಳಾಗಿಯೂ, ಬೇಡದವಳಾಗಿಯೂ
ಇರುವುದಾಗಿ ಭಾವಿಸುತ್ತಿದ್ದೇನೆ.

ನನ್ನ ಕಷ್ಟಗಳನ್ನು ಯಾರೂ ಅರ್ಥೈಸಿಕೊಳ್ಳುವಂತೆ
ಕಾಣುವುದಿಲ್ಲ.

ನನ್ನನ್ನು ನಾನು ಆಳವಾಗಿಯೂ, ಸಂಪೂರ್ಣವಾಗಿಯೂ,
ಪ್ರಜ್ಞಾಪೂರ್ವಕವಾಗಿಯೂ ಸ್ವೀಕರಿಸಿಕೊಳ್ಳುತ್ತೇನೆ.

ಆದರೆ ಏನು ಮಾಡುವುದು?

Copyright © All rights reserved

ಪರಮಾತ್ಮ, ಇದು ನಿಮ್ಮ ದೈವಿಕ ರಚನಾಕ್ರಮ.
ನನ್ನ ಆತ್ಮ ಹಲವು ಜನ್ಮಗಳಿಂದ ನಿಮ್ಮ
ಮಾರ್ಗದರ್ಶನದಂತೆಯೇ ನಡೆಯುತ್ತಿದೆ.

ನನ್ನನ್ನು ನಾನು ಆಳವಾಗಿಯೂ, ಸಂಪೂರ್ಣವಾಗಿಯೂ,
ಪ್ರಜ್ಞಾಪೂರ್ವಕವಾಗಿಯೂ ಸ್ವೀಕರಿಸಿಕೊಳ್ಳುತ್ತೇನೆ.

ಪರಮಾತ್ಮ, ನಾನು ನಿಮ್ಮ ದೈವಿಕ ಯೋಜನೆ
ಮತ್ತು ದೈವಿಕ ಮಾರ್ಗದರ್ಶನವನ್ನು ಒಪ್ಪಿಕೊಳ್ಳುತ್ತೇನೆ.

ನನ್ನಲ್ಲಿರುವ ಆತ್ಮವು ಹೆಣ್ಣೂ ಅಲ್ಲ, ಗಂಡೂ ಅಲ್ಲ,
ನಾನು ನಿಮ್ಮ ದೈವಿಕ ಬೆಳಕು, ನಾನು ನಿಮ್ಮ ಮಗು.

ನನ್ನನ್ನು ನಾನು ಆಳವಾಗಿಯೂ, ಸಂಪೂರ್ಣವಾಗಿಯೂ,
ಪ್ರಜ್ಞಾಪೂರ್ವಕವಾಗಿಯೂ ಸ್ವೀಕರಿಸಿಕೊಳ್ಳುತ್ತೇನೆ.

ಪರಮಾತ್ಮ, ನಾನು ಹೆಣ್ಣಾಗಿ ಹುಟ್ಟಿದ್ದರಿಂದಲೇ
ನನ್ನ ಪೂರ್ವ ಜನ್ಮ ಕರ್ಮಗಳನ್ನು ಸರಿಪಡಿಸಿ,
ನಿಮ್ಮನ್ನು ಹೊಂದಿ, ನಿಮ್ಮಲ್ಲಿ ಬೆರೆತು,
ದೈವಿಕ ಸ್ಥಿತಿಯನ್ನು ಪಡೆಯಲು ಸಾಧ್ಯ
ಎಂಬುದನ್ನು ನೀವು ಚೆನ್ನಾಗಿ ಅರಿತಿರುವಿರಿ.

ನನ್ನನ್ನು ನಾನು ಆಳವಾಗಿಯೂ, ಸಂಪೂರ್ಣವಾಗಿಯೂ,
ಪ್ರಜ್ಞಾಪೂರ್ವಕವಾಗಿಯೂ ಸ್ವೀಕರಿಸಿಕೊಳ್ಳುತ್ತೇನೆ.

ಪರಮಾತ್ಮ, ಈ ಜನ್ಮದಲ್ಲಿ ನನಗೆ ಹೆಣ್ಣಾಗಿ
ಹುಟ್ಟುವಂತೆ ಮಾಡಿದ್ದಕ್ಕೆ ನಿಮಗೆ ಧನ್ಯವಾದಗಳು

ನನ್ನನ್ನು ನಾನು ಆಳವಾಗಿಯೂ, ಸಂಪೂರ್ಣವಾಗಿಯೂ,
ಪ್ರಜ್ಞಾಪೂರ್ವಕವಾಗಿಯೂ ಸ್ವೀಕರಿಸಿಕೊಳ್ಳುತ್ತೇನೆ.

ಪರಮಾತ್ಮನೆ ವಂದನೆ, ವಂದನೆ, ವಂದನೆ.

Copyright © All rights reserved

ಹಣ ಒಳ್ಳೆಯದು. (2 ಸಲ)
ಹಣ ಬಹಳ ಬಹಳ ಒಳ್ಳೆಯದು (2 ಸಲ)
ನನಗೆ ಹಣ ಬೇಕು, ಎಲ್ಲರಿಗೂ ಹಣ ಬೇಕು
ಎಲ್ಲಾ ಕುಟುಂಬಗಳಿಗೂ ಹಣ ಬೇಕು
ಎಲ್ಲಾ ದೇಶಗಳಿಗೂ ಹಣ ಬೇಕು
ಇಡೀ ಪ್ರಪಂಚಕ್ಕೆ ಹಣ ಬೇಕು
ಹಣವೇ ನೀನೇ ಎಲ್ಲಾ
ಹಣವೇ ನೀನೇ ಆರೋಗ್ಯ
ಹಣವೇ ನೀನೇ ಶಿಕ್ಷಣ
ಹಣವೇ ನೀನೇ ಸಂತೋಷ
ಹಣವೇ ನೀನೇ ಸುಖ
ಹಣವೇ ನೀನು ಎಲ್ಲರಿಗೂ ಬಹಳ ಮುಖ್ಯ
ಹಣವೇ ನೀನು ನನಗೆ ಬಹಳ ಮುಖ್ಯ

ಕೊಡುವುದು ಎಂಬುದು ಪಡೆಯುವುದೇ ಆಗಿದೆ
ನಾನು ಎಷ್ಟು ಕೊಡುತ್ತೇನೆಯೋ
ಅಷ್ಟು ಅಧಿಕವಾಗಿ ಪಡೆಯುತ್ತೇನೆ.
ನಾನು ಎಷ್ಟು ಅಧಿಕವಾಗಿ ಪಡೆಯುತ್ತೇನೆಯೋ
ಅಷ್ಟು ಅಧಿಕವಾಗಿ ಕೊಡುತ್ತೇನೆ.
ಇದುವೇ ಪರಮಾತ್ಮನ ನಿಯಮ

ನಾನು ಹಣವನ್ನು ಕೊಡುತ್ತಿದ್ದೇನೆ,
ನಾನು ಹಣವನ್ನು ಹೇರಳವಾಗಿ ಪಡೆಯುತ್ತಿದ್ದೇನೆ.

ನಾನು ಆಹಾರವನ್ನು ಕೊಡುತ್ತಿದ್ದೇನೆ,
ನಾನು ಆಹಾರವನ್ನು ಹೇರಳವಾಗಿ ಪಡೆಯುತ್ತಿದ್ದೇನೆ.

ನಾನು ಪ್ರೀತಿಯನ್ನು ಕೊಡುತ್ತಿದ್ದೇನೆ,
ನಾನು ಪ್ರೀತಿಯನ್ನು ಹೇರಳವಾಗಿ ಪಡೆಯುತ್ತಿದ್ದೇನೆ.

Copyright © All rights reserved

ನಾನು ಯಾವುದನ್ನು ಪಡೆಯುತ್ತಿದ್ದೇನೆಯೋ
ಅದನ್ನು ಹಂಚುತ್ತಿದ್ದೇನೆ.
ನಾನು ಯಾವುದನ್ನು ಹಂಚುತ್ತಿದ್ದೇನೆಯೋ
ಅದನ್ನು ಪರಮಾತ್ಮ ನನಗೆ ಹೇರಳವಾಗಿ
ಬಹುಮಾನವಾಗಿ ಕೊಡುತ್ತಿದ್ದಾರೆ.
ಇದುವೆ ಪರಮಾತ್ಮನ ನಿಯಮ

ಹಣವೇ ನದಿಯ ಹಾಗೆ ನನ್ನ ಕಡೆಗೆ ಹರಿದು ಬಾ.
ಹಣವೇ ಮಳೆಯ ಹಾಗೆ ನನ್ನ ಮೇಲೆ ಸುರಿ.
ಹಣವೇ ಜಲಪಾತದ ಹಾಗೆ ನನ್ನ ಮೇಲೆ ಬೀಳು.
ನಾನು ಹಣದಿಂದ ತುಂಬಿದ್ದೇನೆ.

ಪರಮಾತ್ಮನೇ ನಾನು / ನನ್ನ ಪರಿವಾರವೂ /
ನನ್ನ ಕಾರ್ಯಾಲಯವೂ,
ಅಪಾರವಾದ ಸಂಮೃದ್ಧಿ, ಅಪಾರವಾದ ಸಂಪತ್ತು
ಮತ್ತು ಅಪಾರವಾದ ಹಣವನ್ನು ಪಡೆಯುವಂತೆ
ಆಶೀರ್ವದಿಸಿರಿ.

ಪರಮಾತ್ಮನೇ ಪ್ರತಿಯೊಬ್ಬ ಮನುಷ್ಯನೂ /
ಪ್ರತಿಯೊಂದು ಪರಿವಾರವೂ / ಪ್ರತಿಯೊಂದು ದೇಶವೂ
ಅಪಾರವಾದ ಸಂಮೃದ್ಧಿ ಶಕ್ತಿ, ಅಪಾರವಾದ ಸಂಪತ್ತು
ಮತ್ತು ಅಪಾರವಾದ ಹಣವನ್ನು ಪಡೆಯುವಂತೆ
ಆಶೀರ್ವದಿಸಿರಿ.

ಪರಮಾತ್ಮನೇ ಸಕಲರೂ ಸುಖ, ಸಂತೋಷ,
ಸಂಪತ್ತು ಮತ್ತು ಆರೋಗ್ಯ ತುಂಬಿದ ಬದುಕನ್ನು ನಡೆಸಲಿ.

ನಿಮ್ಮ ಆಶೀರ್ವಾದವು ಎಲ್ಲರೊಂದಿಗೂ ಇರಲಿ.

ಪರಮಾತ್ಮನೇ ವಂದನೆ, ವಂದನೆ, ವಂದನೆ

Copyright © All rights reserved